ಹೆಚ್ಚುವರಿ ವಿದ್ಯುತ್ ಉತ್ಪಾದನೆ

ಶ್ರೀ. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದಲ್ಲಿ ಬೇಕಾಗಿರುವ ಒಟ್ಟು ವಿದ್ಯುತ್ತಿನ ಪ್ರಮಾಣವೆಷ್ಟು ?

೨) ರಾಜ್ಯದಲ್ಲಿ ಉತ್ಪಾದಿಸುತ್ತಿರುವ ಒಟ್ಟು ವಿದ್ಯುತ್ ಪ್ರಮಾಣವೆಷ್ಟು (ಮೆಗಾವಾಟ್ಸ್‌ಗಳಲ್ಲಿ) ಮತ್ತು ನೆರೆ ರಾಜ್ಯಗಳಿಂದ ಖರೀದಿ ಮಾಡುವ ವಿದ್ಯುತ್ತಿನ ಪ್ರಮಾಣವೆಷ್ಟು ?

೩) ಹಾಗೆ ವಿದ್ಯುತ್ ಖರೀದಿ ಮಾಡಲು ಒಂದು ವರ್ಷಕ್ಕೆ ಒಟ್ಟು ಆಗುವ ವೆಚ್ಚವೆಷ್ಟು ?

೪) ರಾಜ್ಯದಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸಲು ಹೆಚ್ಚುವರಿ ವಿದ್ಯುತ್ ಉತ್ಪಾದಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

೫) ರಾಜ್ಯದಲ್ಲಿ ಖಾಸಗಿಯವರಿಗೆ ವಿದ್ಯುತ್ ಉತ್ಪಾದನೆಯನ್ನು ಕೊಡುವ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

೧) ರಾಜ್ಯದಲ್ಲಿ ೧೯೮೯–೯೦ರಲ್ಲಿನ ಅನಿರ್ಬಂಧಿತ ವಿದ್ಯುತ್ತಿನ ಬೇಡಿಕೆ ಸುಮಾರು ೧೮,೯೦೭ ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿತ್ತು. ಅಂದರೆ ದಿನವಹಿ ಸುಮಾರು ೫೧.೮೦ ದಶಲಕ್ಷ ಯೂನಿಟ್ಟುಗಳು. ೧೯೯೦–೯೧ರಲ್ಲಿನ ಅನಿರ್ಬಂಧಿತ ವಿದ್ಯುತ್ತಿನ ಬೇಡಿಕೆ ಸುಮಾರು ೨೧,೮೮೦ ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ. ಅಂದರೆ ದಿನವಹಿ ಸುಮಾರು ೬೦ ದಶಲಕ್ಷ ಯೂನಿಟ್ಟುಗಳು.

೨) ೧೯೮೯–೯೦ನೇ ಸಾಲಿನಲ್ಲಿ ೧೧,೨೧೧ ದಶ ಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಅನ್ನು ರಾಜ್ಯದಲ್ಲಿರುವ ಒಟ್ಟು ೨೬೪೫.೨೦ ಮೆಗಾವಾಟ್ಸ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ (ಕೆ.ಇ.ಬಿ. ಮತ್ತು ಕೆ.ಪಿ.ಸಿ. ಎರಡೂ ಸೇರಿ) ಉತ್ಪಾದಿಸಲಾಯಿತು. ಇದೇ ವರ್ಷದಲ್ಲಿ ೫೮೨ ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಅನ್ನು ಮಹಾರಾಷ್ಟ್ರದಿಂದ ಆಮದು ಮಾಡಿಕೊಳ್ಳಲಾಯಿತು.

೩) ೧೯೮೯–೯೦ನೇ ಸಾಲಿನಲ್ಲಿ ಮಹಾರಾಷ್ಟ್ರದಿಂದ ಆಮದು ಮಾಡಿಕೊಳ್ಳಲಾದ ವಿದ್ಯುತ್ತಿನ ಮೌಲ್ಯ ೩೭.೭೦ ಕೋಟಿ ರೂ.ಗಳು.

೪) ಮುಂದೆ ಉಂಟಾಗಬಹುದಾದ ವಿದ್ಯುತ್ತಿನ ಕೊರತೆಯನ್ನು ನೀಗಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

೧. ಈಗ ಪ್ರಗತಿಯಲ್ಲಿರುವ ವಿದ್ಯುತ್ ಯೋಜನೆಗಳ ಕೆಲಸಗಳನ್ನು ಶೀಘ್ರಗೊಳಿಸುವುದು

೨. ನೆರೆ ರಾಜ್ಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಪಡೆಯುವುದು.

೩. ಕೇಂದ್ರ ಸರ್ಕಾರದ ವಿದ್ಯುತ್ ಘಟಕಗಳಿಂದ ರಾಜ್ಯದ ಪಾಲನ್ನು ಪಡೆಯುವುದು.

೪. ಖಾಸಗಿ ಉದ್ದಿಮೆಗಳು ಸ್ವಯಂ ವಿದ್ಯುತ್ ಉತ್ಪಾದನಾ ಘಟಕಗಳನ್ನು ತಮ್ಮ ಸ್ವಂತ ಬಳಕೆಗೆ ಸ್ಥಾಪಿಸಲು ಉತ್ತೇಜನ ನೀಡಲಾಗುತ್ತಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ನಮಗೆ ಬೇಕಾಗಿರುವ ಒಟ್ಟು ವಿದ್ಯುತ್ತಿನ ಪ್ರಮಾಣವೆಷ್ಟು ಎಂದು ನಾನು ಕೇಳಿರುವುದಕ್ಕೆ ತಾವು ಇಷ್ಟು ದಶಲಕ್ಷ ಯೂನಿಟ್‌ಗಳೆಂದು ಹೇಳಿದ್ದೀರಿ, ಈಗ ನಮ್ಮಲ್ಲಿ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ ಹೇಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯ.—ಕೆಲವು ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನು ಕೆಲವನ್ನು ತೆಗೆದುಕೊಳ್ಳುತ್ತಿದ್ದೇವೆ, ೧೯೮೫ ರಿಂದ ನಮ್ಮ ಇನ್‌ಸ್ಟಾಲ್ ಕೆಪಾಸಿಟಿ ಹೆಚ್ಚಾಗಿದೆ. ಈ ವರ್ಷ ಪರಾಹಿ ಆಗಿದೆ. ಇನ್ನು ಒಂದು ತಿಂಗಳಲ್ಲಿ ಇನ್ನೊಂದು ಯೂನಿಟ್ ಆಗುತ್ತದೆ. ಆದ್ದರಿಂದ ೧೧೫ ಮೆಗಾವ್ಯಾಟ್ಸ್ ವಿದ್ಯುತ್ ಬರುತ್ತದೆ. ಯಲಹಂಕದ ವಿದ್ಯುತ್ ಸ್ಥಾವರದ ಒಗ್ಗೆ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಹೀಗೆ ನಾವು ಪ್ರತಿವರ್ಷ ಹೆಚ್ಚು ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುತ್ತಾ ಹೋದರೂ ಬೇಡಿಕೆ ಇರುವಷ್ಟು ಪೂರೈಸಲು ಸಾಧ್ಯವಾಗುತ್ತಿಲ್ಲ. ಇನ್ನೂ

ಕೊಗತೆ ಬೀಳುತ್ತಲೇ ಇದೆ. ಈ ಪ್ರಾಜೆಕ್ಟ್‌ಗಳನ್ನು ಕೇವಲ ೬ ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ಪೂರೈಸುವುದಕ್ಕಾಗುವುದಿಲ್ಲ. ಆದರೂ ಕೂಡ ಬೆರತಕ್ಕ ಬೇಡಿಕೆಯನ್ನು ಪೂರೈಸಲು ನಾವು ಎಷ್ಟೇ ಹೊಸ ಹೊಸ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡರೂ ಅದು ಸಾಲದೇ ಬರುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ.—ಬೆಂಗಳೂರಿನ ಸುತ್ತ ಮುತ್ತ ಸುಮಾರು ೫೦ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯಲ್ಲಿ ಖಾಸಗೀಯವರೂ ಮತ್ತು ಸರ್ಕಾರದವರೂ ಸೇರಿ ವಿದ್ಯುತ್ ಉತ್ಪಾದನೆಯನ್ನು ಮಾಡುವುದಕ್ಕೆ ಹೊರಟಿದ್ದೀರೆಂದು ಕೇಳಿದ್ದೇವೆ. ಇದು ನಿಜವೇ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಎಂ. ಯಾಹ್ಯ—ಖಾಸಗಿ ವಿಚಾರದಲ್ಲಿ ಹೇಳುವುದಾದರೆ ಯಲಹಂಕದಲ್ಲಿ ಯಾವ ಘಟಕ ಬರುತ್ತಿದೆ ಅದರ ೧೬೫ ಕೋಟಿರೂಪಾಯಿಗಳ ಪೆಚ್ಚಟ್ಟಿಂದ ೨೨೦ ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಉತ್ಪಾದನಾ ಶಕ್ತಿಯನ್ನು ಳ್ಳದ್ದಾಗಿದೆ. ಅದಕ್ಕಾಗಿ ಖಾಸಗೀ ಇಂಡಸ್ಟ್ರೀಸ್‌ನವರಿಂದಲೂ ಸಹಾಯ ತೆಗೆದುಕೊಂಡಿದ್ದೇವೆ. ಫ್ರಾನ್ಸ್‌ನಿಂದ ೯೦ ಕೋಟಿ ರೂಪಾಯಿಂಗಳ ಏಡ್ಸ್ ಬರುತ್ತಿದೆ. ೩೦ ಕೋಟಿ ರೂಪಾಯಿಗಳು ಬಾಕಿ ನಮ್ಮ ಅಸ್ಸೂಯಲ್ ಪ್ಲಾನ್‌ನಿಂದ ಹಾಕಲಾಗುತ್ತಿದೆ. ಎರಡನೆಯದಾಗಿ ಕೆಲವು ಖಿ-೬ ಚಿಕ್ಕ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಸ ಏನು ಇದೆ ಅವುಗಳನ್ನು ಕಳೆದ ಸರ್ಕಾರ ದವರೇ ತೆಗೆದು ಕೊಂಡಿದ್ದರು. ಅವುಗಳಲ್ಲಿ ಒಂದರ ಕೆಲಸ ಪ್ರಾರಂಭ ನಡೆಯುತ್ತಿದೆ. ಬಾಕಿ ಯಾವುದೂ ನಡೆಯುತ್ತಿಲ್ಲ ವೆಂದು ತಿಳಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಸಲಕರಣೆಗಳ ಕೊರತೆಯ ಬಗ್ಗೆ.

೨೦. ಶ್ರೀ ಬಿ. ರಮಾನಾಥ ರೈ, (ಬಂಟವಾಳ).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಬೇಡಿಕೆದಾರರ ಸಂಖ್ಯೆ ಜಾಸ್ತಿಯಾಗಿ ವಿದ್ಯುತ್ ಸಲಕರಣೆಗಳ ಕೊರತೆಯಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ .

(ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳಲಿರುವ ಕ್ರಮವೇನು.

ಇ) ಬೇಡಿಕೆದಾರರ ಹಾಗೂ ಬಳಕೆದಾರರ ಅನುಕೂಲಕ್ಕಾಗಿ ಸೂಪರಿಂಟೆಂಡಿಂಗ್ ಇಂಜಿನೀಯರ ರವರ ಪೂರ್ಣ ಪ್ರಮಾಣದ ವೃತ್ತ ಕಛೇರಿಯನ್ನು ತೆರೆಯುವ ಯೋಜನೆ ಇದೆಯೆ ?

ಶ್ರೀ ಎಸ್. ಎಂ. ಯಾಹ್ಯ.—(ಕೈಗಾರಿಕೆ, ಇಂಧನ ಹಾಗೂ ಪಕ್ಷ ಸಚಿವರು).—

ಅ) ಬಂದಿರುವುದಿಲ್ಲ.

ಆ) ' ಅ 'ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮಂಗಳೂರಿನಲ್ಲಿ ವೃತ್ತ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆಯು ಕೆ.ಇ.ಬಿ.ಯ ಪರಿಶೀಲನೆಯಲ್ಲಿದೆ.

ಶ್ರೀ ಬಿ. ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ ನನ್ನ ಪ್ರಥಮ ಪ್ರಶ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಬೇಡಿಕೆದಾರರ ಸಂಖ್ಯೆ ಜಾಸ್ತಿಯಾಗಿ ವಿದ್ಯುತ್ ಸಲಕರಣೆಗಳ ಕೊರತೆಯಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಮಾನ್ಯ ಸಚಿವರು ಇಲಾಖೆಯ ಅಧಿಕಾರಿಗಳ ಮೂಲಕ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಐದು ವರ್ಷಗಳಿಂದ ಪಂಪ್ ಸೆಟ್ಟುಗಳನ್ನು ಖರೀದಿಸಿ ಅವುಗಳನ್ನು ಅಳವಡಿಸಿದ್ದರೂ ಅದಕ್ಕೆ ಬೇಕಾದ ವಿದ್ಯುತ್ತನ್ನು ಒದಗಿಸಲು ಇಲಾಖೆಯ ಮೂಲಕ ಸಾಧ್ಯವಾಗಿಲ್ಲ. ನಿಮ್ಮ ಪಂಪ್‌ಸೆಟ್ ಸ್ಕೀಮ್ ಎನ್‌ಆರ್‌ಡಬ್ಲ್ಯೂಎಸ್, ಆರ್‌ಡಬ್ಲ್ಯೂಎಸ್ ನಿಂದ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಾಗದ ಕಾರಣ ತಾಲ್ಲೂಕು ಪಂಚಾಯತ್ ಅಧಿಕಾರಿಗಳನ್ನು ಭೇಟಿ ಮಾಡಿ ಆದಷ್ಟು ಬೇಗ ವಿದ್ಯುತ್ ಸರಬರಾಜು ಮಾಡಬೇಕೆಂದು ಹೇಳಿದಾಗ, ನಮಗೆ ಸಲಕರಣೆಗಳ ಕೊರತೆ ಇದೆ. ವೈರ್ ಇಲ್ಲ, ನಮ್ಮಲ್ಲಿ ಟ್ರಾನ್ಸ್‌ಫಾರ್ಮರ್ಸ್ ಇಲ್ಲವೆಂದು ಉತ್ತರವನು ಕೊಟ್ಟಿರುತ್ತಾರೆ. ಈಗ ನಾವು ಪ್ರಶ್ನೆಯನ್ನು ಕೇಳಿದರೆ ಸಲಕರಣೆಯ ಕೊರತೆ ಇದೆ ಎಂದು ಹೇಳಿ ಬಿಟ್ಟರೆ ಆ ಒಂದು ಇಲಾಖೆಯ ಮುಖ್ಯಸ್ಥರು ನಿದ್ದೆ ಮಾಡುತ್ತಿರುತ್ತಾರೆಯೇ ? ಅಥವಾ ಅವರ ಕೈ ಕೆಳಗಿನ ನೌಕರರು ಕೆಲಸ ಮಾಡುತ್ತಿಲ್ಲವೇ ಇದನ್ನು ಯಾವ ರೀತಿ ಸರಿ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.